**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ/ ಶ್ರೀಮತಿ ಎಸ್. ವಿ ಸಂಕನೂರ, ಶ್ರೀ ಎಸ್.ಎಲ್ ಭೋಜೇಗೌಡ ಹಾಗೂ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ರವರು ಮಂಡಿಸಿರುವ ನಿಯಮ 330 ರಡಿ ಗಮನ ಸೆಳೆಯು ಸೂಚನೆ**

**ವಿಷಯ:**

**ಶಾಲಾ ಶಿಕ್ಷಣ ಇಲಾಖೆಯಲ್ಲಿ 2026-27ನೇ ಸಾಲಿನಿಂದ 1 ರಿಂದ 10ನೇ ತರಗತಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ ಮೌಲ್ಯ ಶಿಕ್ಷಣ (ದೈಹಿಕ ಶಿಕ್ಷಣ ಪಠ್ಯವಸ್ತು ಒಳಗೊಂಡಂತೆ) ಎಂಬ ಪಠ್ಯಪುಸ್ತಕ ಮುದ್ರಿಸಿ ವಿತರಿಸಲು ಸರ್ಕಾರ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ಇವರಿಗೆ ದಿನಾಂಕ:29-01-2026 ರಂದು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಆದೇಶದಿಂದ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದಲ್ಲದೇ ದೈಹಿಕ ಶಿಕ್ಷಣ ಪಠ್ಯವಸ್ತುವಿಗೆ ಧಕ್ಕೆ ಬರುವ ಭಯ ದೈಹಿಕ ಶಿಕ್ಷಕರ ಸಂಘಟನೆಗಳಿಗೆ ಆಗಿರುವ ಬಗ್ಗೆ.**

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಇಪಿ 116 ಎಂಪಿಇ 2025 ದಿನಾಂಕ:02 02 2026ರ ಆದೇಶದಲ್ಲಿ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ಪಠ್ಯವಸ್ತುವನ್ನು ಒಳಗೊಂಡಂತೆ ಮೌಲ್ಯ ಶಿಕ್ಷಣ ಪಠ್ಯ ಪುಸ್ತಕವನ್ನು ಮುದ್ರಿಸಿ ವಿತರಿಸುವ ಬಗ್ಗೆ ಆದೇಶಿಸಲಾಗಿರುತ್ತದೆ. ದೈಹಿಕ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣ ಪಠ್ಯ ಪುಸ್ತಕಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಲಭ್ಯಗೊಳಿಸಲಾಗುವುದು. ರಾಜ್ಯ ಪಠ್ಯಕ್ರಮ ಅನುಸರಿಸುವ ಖಾಸಗೀ ಶಾಲೆಗಳೂ ಸಹ ಸದರಿ ವಿವರವನ್ನು ಪಡೆದುಕೊಂಡು ದೈಹಿಕ ಶಿಕ್ಷಣ ಮತ್ತು ಮೌಲ್ಯ ಶಿಕ್ಷಣದ ಲಾಭ ಪಡೆದುಕೊಳ್ಳಬಹುದಾಗಿರುತ್ತದೆ. ಪ್ರಸ್ತುತ ಅನುದಾನ ರಹಿತ ಶಾಲೆಗಳು ಪಠ್ಯ ಪುಸ್ತಕಗಳನ್ನು ಕೊಳ್ಳುವ ವ್ಯವಸ್ಥೆಯಿದ್ದು ಮೌಲ್ಯ ಶಿಕ್ಷಣಕ್ಕೆ ಸದರಿ ಶಾಲೆಗಳು ತಮ್ಮ ಹಂತದಲ್ಲಿ ಕ್ರಮವಹಿಸಬಹುದಾಗಿರುತ್ತದೆ.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ 'ಸದೃಢವಾದ ದೇಹದಲ್ಲಿ ಆರೋಗ್ಯಯುತ ಮನಸ್ಸು' ಎನ್ನುವಂತೆ ಮಗುವಿನ ಸರ್ವಾಂಗೀಣ ಬೆಳವಣಿಗೆ ಮಾಡುವುದೇ ಶಿಕ್ಷಣದ ಗುರಿ. ಶಾರೀರಿಕ, ಬೌದ್ಧಿಕ, ಸಾಮಾಜಿಕ, ನೈತಿಕ ಶಿಕ್ಷಣವು ಪ್ರಮುಖವಾಗಿದ್ದು, ಸದರಿ ವಿಷಯದಲ್ಲಿ ಆಟ, ಯೋಗಾಸನ, ಪಥ ಕವಾಯತು, ಕ್ರೀಡೆ, ಮೌಲ್ಯಗಳು, ನೈರ್ಮಲ್ಯ, ಆರೋಗ್ಯ ಮತ್ತು ಆಟಗಳ ಅವಧಿಗಳು ಎಂದಿನಂತೆ ಮುಂದುವರೆದಿರುತ್ತವೆ.

--2

ರಾಜ್ಯವು ದೈಹಿಕ ಶಿಕ್ಷಣದಲ್ಲಿ ಆರೋಗ್ಯ, ಯೋಗ, ಕ್ರೀಡೆ, ಮೌಲ್ಯ ಮತ್ತು ನೈರ್ಮಲ್ಯದ ವಿಷಯಗಳನ್ನು ಸೇರ್ಪಡೆಗೊಳಿಸಿ ಸಮಗ್ರವಾಗಿ ದೈಹಿಕ ಶಿಕ್ಷಣವನ್ನು ಬೋಧಿಸುವ, ಕ್ರೀಡೆ ಸಂಘಟಿಸುವ ಕಾರ್ಯವನ್ನು ಗೌರವಿಸುತ್ತಾ ಬಂದಿರುತ್ತದೆ. ಸರ್ಕಾರದ ಆದೇಶದಂತೆ, ಪ್ರಸ್ತುತ ಮೌಲ್ಯ ಶಿಕ್ಷಣ ಪಠ್ಯಪುಸ್ತಕದಲ್ಲಿ ದೈಹಿಕ ಶಿಕ್ಷಣ ಪಠ್ಯ ಪುಸ್ತಕದಲ್ಲಿನ ಎಲ್ಲಾ ವಿಷಯಗಳ ತಾತ್ವಿಕ ಹಾಗೂ ಪ್ರಾಯೋಗಿಕ ಸಾರಂಶಗಳನ್ನು ಅಳವಡಿಸಲಾಗಿರುತ್ತದೆ. ಚಾಲ್ತಿಯಲ್ಲಿದ್ದ ದೈಹಿಕ ಶಿಕ್ಷಣ ಪಠ್ಯ ಪುಸ್ತಕಗಳನ್ನು ಇಲಾಖೆಯ ವೈಬ್‌ಸೈಟ್‌ನಲ್ಲಿ ಪ್ರಕಟಿಸಿ ಲಭ್ಯಗೊಳಿಸಲಾಗುವುದು. ಶಾಲಾ ತರಗತಿ ಪ್ರಕ್ರಿಯೆಯಲ್ಲಿ ದೈಹಿಕ ಶಿಕ್ಷಣದ ಅವಧಿಗಳು ನಿರಂತರವಾಗಿ ಮುಂದುವರೆಯುತ್ತವೆ. ದೈಹಿಕ, ಪಠ್ಯವಸ್ತುವಿಗೆ ಯಾವುದೇ ದಕ್ಕೆಯಾಗದಂತೆ ಪ್ರತಿಪಾಠದ ಸಾರಾಂಶವನ್ನೂ ಪುಸ್ತಕಗಳು ಒಳಗೊಂಡಿರುತ್ತವೆ.

ಮೌಲ್ಯ ಶಿಕ್ಷಣ ಪಠ್ಯದಲ್ಲಿನ ದೈಹಿಕ, ಆರೋಗ್ಯ ಹಾಗೂ ಯೋಗ ವಿಷಯಗಳಿಗೆ ಸಂಬಂಧಿಸಿದಂತೆ, ದೈಹಿಕ ಶಿಕ್ಷಣ ಶಿಕ್ಷಕರೇ ಬೋಧನೆಯನ್ನು ಕೈಗೊಳ್ಳಬೇಕಿರುತ್ತದೆ. ಉಳಿದ ಮೌಲ್ಯ ವಿಷಯಗಳನ್ನು ಆಯಾ ವಿಷಯಕ್ಕೆ ಸಂಬಂಧಿಸಿದ ಶಿಕ್ಷಕರ ಮೂಲಕ ಕಲಿಕೆಯನ್ನು ಅನುಕೂಲಿಸಲು ಯೋಜಿಸಲಾಗಿದೆ. ಮಕ್ಕಳ ಕ್ರೀಡಾ ಅವಧಿಗಳು ಎಂದಿನಂತೆಯೇ ಮುಂದುವರೆದಿರುತ್ತವೆ.

ಈ ಹಿಂದಿನಂತೆಯೇ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ದೈಹಿಕ ಶಿಕ್ಷಣದೊಂದಿಗೆ ಮೌಲ್ಯ ಶಿಕ್ಷಣವನ್ನು ಒಳಗೊಂಡಂತೆ ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಕ್ರಮವಹಿಸುವ ನಿಟ್ಟಿನಲ್ಲಿ ಮೌಲ್ಯ ಶಿಕ್ಷಣ ಪಠ್ಯ ಪುಸ್ತಕದ ಮುಖಪುಟದಲ್ಲಿ ಮುಖಪುಟದ ಶೀರ್ಷಿಕೆಯನ್ನು ಮೌಲ್ಯ ಶಿಕ್ಷಣ (ದೈಹಿಕ, ಮಾನಸಿಕ, ಸಾಮಾಜಿಕ ಶಿಕ್ಷಣ) ಎಂದು ನಮೂದಿಸಿ ಎಲ್ಲಾ ಆಯಾಮಗಳಿಗೂ ಒತ್ತು ನೀಡಲಾಗಿದೆ.

**ಸಂಖ್ಯೆ: ಇಪಿ 111 ಎಸ್‌ಇಎಸ್ 2026**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**